# ಮನೋವಿಜ್ಞಾನದಲ್ಲಿ ಮಹಿಳೆಯರು

ಮನೋವಿಜ್ಞಾನದ ಉಗಮ ಮತ್ತು ಬೆಳವಣಿಗೆಗಳ ಬೆಳವಣಿಗೆಯ ಬಗೆಗಿರುವ ಬರಹಗಳಲ್ಲಿ ಎಲ್ಲೂ ಮಹಿಳೆಯರ ಉಲ್ಲೇಖವಿಲ್ಲದಿರುವುದು ಮಹಿಳೆಯರು ಈ ಕ್ಷೇತ್ರದಲ್ಲಿ ಕೆಲಸ ಮಾಡಲಿಲ್ಲವೇ ಎಂಬ ಪ್ರಶ್ನೆ ಓದುಗರಲ್ಲಿ ಸಹಜವಾಗಿಯೇ ಹುಟ್ಟುತ್ತದೆ. ಹಿಂದೆ ಮಹಿಳೆಯರ ಮೇಲಿದ್ದ ನಿರ್ಬಂಧಗಳನ್ನು ಗಮನಿಸಿದಾಗ ಇದು ಆಶ್ಚರ್ಯಕರ ಎನಿಸುವುದಿಲ್ಲ. ಮನೋವಿಜ್ಞಾನದಲ್ಲಿ ಮಹಿಳೆಯರು ಸಂಶೋಧನೆಗಳನ್ನು ಮಾಡಿದರೂ ಅವು ಪುರುಷರ ( ಗುರು, ಮಾರ್ಗದರ್ಶಿ, ಸಹೋದ್ಯೋಗಿ) ಹೆಸರಿನಲ್ಲಿ ಪ್ರಕಟವಾಗುತ್ತಿದ್ದವು. ಕೆಲವು ಬಾರಿ ಕೇವಲ ಕುಟುಂಬದ ಹೆಸರನ್ನು ಮಾತ್ರ ಪ್ರಕಟನೆಗಳಲ್ಲಿ ಹಾಕುತ್ತಿದ್ದರಿಂದ ಲೇಖಕರ ಲಿಂಗವನ್ನು ತಿಳಿದುಕೊಳ್ಳಲಾಗುತ್ತಿರಲಿಲ್ಲ, ವಿವಾಹವಾದ ಮೇಲೆ ಪತಿಯ ಹೆಸರನ್ನು ಬಳಸುತ್ತಿದ್ದರಿಂದ ಮಹಿಳೆಯ ವೃತ್ತಿಯಲ್ಲಿ ನಿರಂತರತೆ ಇದ್ದರೂ ತಿಳಿದು ಬರುತ್ತಿರಲಿಲ್ಲ. ಪತಿ-ಪತ್ನಿ ಜೊತೆಯಾಗಿ ಕೆಲಸಮಾಡಿದರೂ ಅದು ಪತಿಯ ಹೆಸರಿನಿಂದಲೇ ಗುರುತಿಸಲ್ಪಡುತ್ತಿತ್ತು. ಅನೇಕ ಉಚ್ಚ ಶಿಕ್ಷಣ ಸಂಸ್ಥೆಗಳು ಮಹಿಳೆಯರಿಗೆ ಪ್ರವೇಶ ನಿರಾಕರಿಸುತ್ತಿದ್ದರೂ ಸಹ ಅಂತಹ ತಾರತಮ್ಯಗಳನ್ನು ಮೆಟ್ಟಿನಿಂತ ಹಲವು ಮಹಿಳೆಯರು ಇದ್ದಾರೆ. ಇಲ್ಲಿ 19ನೆಯ ಶತಮಾನ ಮತ್ತು 20 ನೆಯ ಶತಮಾನದ ಆದಿಯಲ್ಲಿ ತಮ್ಮ ಸಮಾಜ, ಸಂಸ್ಕೃತಿ, ಲಿಂಗತ್ವ ವಿಧಿಸಿದ್ದ ಮಿತಿಗಳನ್ನು ಹಿಂದಿಕ್ಕಿ ಮುಂದಿನ ವೈಜ್ಞಾನಿಕ ಪೀಳಿಗೆಗೆ ದಾರಿ ಮಾಡಿದ, ಹೊಸವಿಷಯಗಳನ್ನು ಪರಿಚಯಿಸಿದ ಮಹಿಳಾ ವಿಜ್ಞಾನಿಗಳ ಬಗ್ಗೆ ಕಿರು ಪರಿಚಯ ಇದೆ.

ಕ್ರಿಸ್ಟೀನ್ ಅಮೇರಿಕಾದ ಕನೆಟಿಕೆಟ್‌ನಲ್ಲಿ ಜನಿಸಿದಳು. ವಾಸ್ಸರ್ ಕಾಲೇಜಿನಲ್ಲಿ ಆಗಿನ ಕಾಲದ ಏಕೈಕ ಮಹಿಳಾ ಖಗೋಳ ವಿಜ್ಞಾನಿಯಾಗಿದ್ದ ಮರಿಯಾ ಮಿಷೆಲ್ (Maria Michelle) ಳ ಬಳಿ ಅಧ್ಯಯನ ಮಾಡುವ ಸುಯೋಗ ಅವಳಿಗೆ ಒದಗಿತು. ಆರ್ಥಿಕ ಮುಗ್ಗಟ್ಟಿನಿಂದ ನಿಂತು ನಿಂತು ಮುಂದೆಸಾಗಿದ ಅವಳ ಶಿಕ್ಷಣ ಪೂರ್ತಿಯಾದ ಮೇಲೆ ಗಣಿತ ಮತ್ತು ವಿಜ್ಞಾನದ ಶಿಕ್ಷಕಿಯಾದಳು. 1876 ರಲ್ಲಿ ಜಾನ್ ಹಾಪ್ಕಿನ್ಸ್ ಗೆ ತನ್ನ ಲಿಂಗ ಬಹಿರಂಗ ಪಡಿಸದೆ, ಸಿ. ಲ್ಯಾಡ್ ಎಂದು ಅರ್ಜಿ ಕಳಿಸಿದಳು. ಅರ್ಜಿ ಸ್ವೀಕೃತವಾದ ಮೇಲೆ ಜಾನ್ ಸಿಲ್ವೆಸ್ಟರ್ (John Sylvester) ಎಂಬ ಪ್ರಖ್ಯಾತ ಗಣಿತಜ್ಞ ಹಾಪಕಿನ್ಸ್ ನ ಆಡಳಿತವನ್ನು ಹೇಗೋ ಒಪ್ಪಿಸಿದ. ಅವಳು ಬೇರೆ ಪುರುಷ ವಿದ್ಯಾರ್ಥಿಗಳಿಗೆ ಸಮ ಎಂದು ಪರಿಗಣಿಸಲಾಗುವುದಿಲ್ಲ ಎಂಬ ಷರತ್ತಿನ ಮೇಲೆ ಅವಳಿಗೆ ಪ್ರವೇಶ ದೊರೆಯಿತು. ಫೇಬಿಯನ್ ಫ್ರಾಂಕ್ಲಿನ್‌ನನ್ನು ವಿವಾಹವಾದಾಗ ವಿವಾಹಿತೆಯರಿಗೆ ಕೆಲಸಮಾಡಲು ಅನುಮತಿ ಇಲ್ಲ ಎಂದಿದ್ದರೂ ಸಂಬಳ ಪಡೆಯದೆ ಅಧ್ಯಾಪಕ



ಕ್ರಿಸ್ಟೀನ್ ಲ್ಯಾಡ್-ಫ್ರಾಂಕ್ಲಿನ್ (1847-1930)



ಮಾರ್ಗರೆಟ್ ಫ್ಲಾಯ್ ವಾಶ್ಬರ್ನ್
(1871-1939)

ವೃತ್ತಿ ಮುಂದುವರಿಸಿದಳು. 1891ರಲ್ಲಿ ಜರ್ಮನಿಗೆ ಹೋಗಿ ಮುಲ್ಲರ್ (Mueller), ಹೆಲ್ಮ್ ಹೋಲ್ಟ್ಜ್(Helmholtz), ಮತ್ತು ಹೆರಿಂಗ್ (Herring) ಅವರ ಸಂಶೋಧನೆಗಳ ಪರಿಚಯ ಮಾಡಿಕೊಂಡಳು. 1892 ರಲ್ಲಿ ವರ್ಣ ಸೂಕ್ಷ್ಮ ದೃಷ್ಟಿಯ ಬಗ್ಗೆ ತನ್ನದೇ ಸಿದ್ಧಾಂತವನ್ನು ಮಂಡಿಸಿದಳು. ಟಿಚೆನರ್ (Titchener) ನ 'ಕೇವಲ ಪುರುಷರಿಗೆ ಮಾತ್ರ' ಎನ್ನುವ ಧೋರಣೆಯನ್ನು ಖಂಡಿಸಿ ಅವನಿಗೆ ಅನೇಕ ಪತ್ರಗಳನ್ನು ಬರೆದಿದ್ದಳು. ಜೀವನದುದ್ದಕ್ಕೂ ಮಹಿಳೆಯ ಭೌದ್ಧಿಕತೆಯನ್ನು ಅದುಮಿಡುವ ಸಮಾಜದ ರೀತಿಗಳನ್ನು ಎದುರಿಸಿದ್ದು 1926ರಲ್ಲಿ ಹಾಪಕಿನ್ಸ್‌ನ 50 ನೆಯ ವಾರ್ಷಿಕೋತ್ಸವದ ವೇಳೆ ಅವಳಿಗೆ ಹಿಂದೆ ನೀಡಬೇಕಾಗಿದ್ದ ಡಾಕ್ಟರೇಟ್ ನೀಡಿ ಗೌರವಿಸಲಾಯಿತು. ದಿ ಅಸೋಸಿಯೇಷನ್ ಫಾರ್ ವಿಮೆನ್ ಇನ್ ಸೈಕಾಲಜಿ (The Association for Women in Psychology) ಅವಳ ನೆನಪಿನಲ್ಲಿ "ಕ್ರಿಸ್ಟೀನ್ ಲ್ಯಾಡ್-ಫ್ರಾಂಕ್ಲಿನ್ ಪುರಸ್ಕಾರ" ವನ್ನು ಸಂಸ್ಥೆಗೆ ಉತ್ತಮ ಸೇವೆಸಲ್ಲಿಸಿದವರಿಗೆ ನೀಡುತ್ತದೆ.

ಹಾರ್ಟ್ಫರ್ಡ್, ಕನೆಟಿಕಟ್‌ನಲ್ಲಿ ಹುಟ್ಟಿದ ಮೇರಿ ವೆಲ್ಸಲಿ ಕಾಲೇಜಿನಲ್ಲಿ ಬೋಧಕಿಯಾಗಿದ್ದಳು. ವಿಲಿಯಮ್ ಜೇಮ್ಸ್‌ನ ಉಪನ್ಯಾಸಗಳನ್ನು ಕೇಳಿದ್ದ ಅವಳು, ಹಾರ್ವರ್ಡ್‌ಗೆ ಪ್ರವೇಶ ಕೋರಿದಳು. ಬಹಳ ಪ್ರಯಾಸದ ನಂತರ, ಅವಳಿಗೆ 'ಅತಿಥಿ'ಯಂತೆ ಉಪನ್ಯಾಸಗಳಿಗೆ ಹಾಜರಾಗಲು ಅನುಮತಿ ದೊರೆಯಿತು. ಜೇಮ್ಸ್ ಮತ್ತು ಹ್ಯೂಗೋ ಮುನ್ಸ್ಟರ್‌ಬರ್ಗ್ (Hugo Munsterberg) ಬಳಿ ಸಂಶೋಧನೆ ಮಾಡಿ ಪ್ರಬಂಧ ಮಂಡಿಸಿದರೂ ಅವಳು ಮಹಿಳೆ ಎಂಬ ಒಂದೇ ಕಾರಣಕ್ಕೆ ಹಾರ್ವರ್ಡ್ ಅವಳಿಗೆ ಡಾಕ್ಟರೇಟ್ ಪದವಿ ನೀಡಲಿಲ್ಲ. ಅಲ್ಲದೆ ಮನೋವಿಜ್ಞಾನದಲ್ಲಿ ಪ್ರಜ್ಞಾಪೂರ್ವ ಸ್ವಯಂ (the conscious self)ನ ಬಗ್ಗೆ ಮಾಡಿದ ಅಧ್ಯಯನ ಕುರಿತು ಅವಳು ಬರೆದ ಅನೇಕ ಸಂಶೋಧನಾ ಲೇಖನಗಳನ್ನು ಹಾರ್ವರ್ಡ್ ಗುರುತಿಸಲಿಲ್ಲ. ಯುಗ್ಮ ಸಾಹಚರ್ಯ ವಿಧಾನ (paired-association technique) ವನ್ನು ಕಂಡುಹಿಡಿದ ಮತ್ತು 'ಸ್ವ'ದ ಬಗ್ಗೆ ಅಧ್ಯಯನಗಳನ್ನು ಮಾಡಿದ ಅವಳು ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಷನ್‌ನ ಪ್ರಥಮ ಮಹಿಳಾ ಅಧ್ಯಕ್ಷೆಯಾದಳು.




ಮೇರಿ ವಿಟನ್ ಕಾಲ್ಕಿನ್ಸ್
(1863-1930)

ನ್ಯೂಯಾರ್ಕ್ ನಿವಾಸಿಯಳಾಗಿದ್ದ ಮಾರ್ಗರೆಟ್ ಜೇಮ್ಸ್ ಮಕೀನ್ ಕೆಟೆಲ್ (James Mckeen Cattell) ನ ಬಳಿ ಅಧ್ಯಯನ ಮಾಡಲು ಆಸಕ್ತಳಾಗಿದ್ದಳು. ಆದರೆ ಆಗ ಅವನಿದ್ದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಮಹಿಳೆಯರಿಗೆ ಅವಕಾಶವಿರಲಿಲ್ಲ. ಆದರೂ ಅವನ ಉಪನ್ಯಾಸಗಳಿಗೆ ಹಾಜರಿರಲು ಅನುಮತಿ ದೊರೆತಿದ್ದು ಮುಂದೆ ಕೆಟೆಲ್ ನ ಸೂಚನೆ

ಮೇರೆಗೆ ಕಾರ್ನೆಲ್ ಗೆ ತೆರಳಿದಳು. ಅಲ್ಲಿ ಅವಳು ಟಿಚೆನರ್ ನ ಪ್ರಥಮ ಮತ್ತು ಏಕೈಕ ಮಹಿಳಾ ವಿದ್ಯಾರ್ಥಿನಿ ಯಾಗಿದ್ದು 1894 ರಲ್ಲಿ ಮನೋವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ ಪಡೆದ ಪ್ರಥಮ ಮಹಿಳೆಯಾದಳು. ಅದೇ ತಾನೆ ಅಸ್ತಿತ್ವಕ್ಕೆ ಬಂದಿದ್ದ ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಷನ್‌ಗೆ ಚುನಾಯಿತಳಾದಳು. 1903 ರಲ್ಲಿ ಸಿನ್ಸಿನಾಟಿ ವಿಶ್ವವಿದ್ಯಾಲಯದ ಏಕೈಕ ಮಹಿಳಾ ಅಧ್ಯಾಪಕಿಯಾಗಿದ್ದು ಮುಂದೆ ತಾನು ಓದಿದ್ದ ವಾಸ್ಸರ್ ಕಾಲೇಜಿನಲ್ಲಿ ದರ್ಶನ ಶಾಸ್ತ್ರದ ಬೋಧಕಳಾಗಿ ಸೇರಿ ನಿವೃತ್ತಿಯವರೆಗೂ ಅಲ್ಲೇ ದುಡಿದಳು. ಇವಳು ಸ್ಪರ್ಶಪ್ರತ್ಯಕ್ಷಣದ ಬಗ್ಗೆ ಮಾಡಿದ್ದ ಪ್ರಯೋಗಗಳ ವಿವರವನ್ನು ವೂಂಟ್ ತನ್ನ ವಿದ್ವತ್ ಪತ್ರಿಕೆಯಲ್ಲಿ ಪ್ರಕಟಿಸಿದ್ದನು. 1908 ರಲ್ಲೇ ಪ್ರಾಣಿಗಳ ಮನಸ್ಸಿನ ಬಗ್ಗೆ ತುಲನಾತ್ಮಕ ಮನೋವಿಜ್ಞಾನದ ಪುಸ್ತಕ ಬರೆದಿದ್ದಳು.

ಲಿಲಿಯೆನ್ ಹದಿಮೂರು ಮಕ್ಕಳನ್ನು ಹೆತ್ತ ಮಹಾತಾಯಿ. ಔದ್ಯೋಗಿಕ ಇಂಜಿನಿಯರಿಂಗ್‌ನಲ್ಲಿ ಡಾಕ್ಟರೇಟ್ ಪಡೆದ ಪ್ರಥಮ ಮಹಿಳೆ. ಇಂಜಿನಿಯರ್ ಮತ್ತು ಶಿಕ್ಷಕಿಯಾಗಿದ್ದವಳು ಕಾಲ-ಚಲನೆ ಅಧ್ಯಯನ (time-motion study)ದಲ್ಲಿ ಮನೋವಿಜ್ಞಾನವನ್ನು ಉಪಯೋಗಿಸಿದ್ದಳು. ಇವಳು ಮತ್ತು ಇವಳ ಪತಿ ಫ್ರಾಂಕ್ ಗಿಲ್ಬ್ರೆತ್ ಔದ್ಯೋಗಿಕ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಮಾನವ ಕಾರಕಾಂಶಗಳನ್ನು ಅಳವಡಿಸಿದರು. ಇವಳು ಮನೋವಿಜ್ಞಾನದ ಪುಸ್ತಕ ಬರೆದಾಗ ಮಹಿಳೆ ಬರೆದ ಪುಸ್ತಕ ಎಂದರೆ ಯಾರೂ ಕೊಳ್ಳುವುದಿಲ್ಲ ಎಂಬ ಕಾರಣಕ್ಕೆ ರಕ್ಷಾಕವಚದ ಮೇಲೆ ಇವಳ ಹೆಸರು ಹಾಕಲು ಪ್ರಕಾಶಕ ನಿರಾಕರಿಸಿದ್ದ. ಉದ್ಯಮಗಳು ಇವಳನ್ನು ನೇಮಿಸಿಕೊಳ್ಳಲು ನಿರಾಕರಿಸುತ್ತಿದ್ದವು. ಇಂತಹ ಅನೇಕ ಅಡಚಣೆಗಳನ್ನು ಎದುರಿಸಿ ತನ್ನ ತೊಂಬತ್ತನೆಯ ವಯಸ್ಸಿನವರೆಗೂ ಸಕ್ರಿಯಳಾಗಿದ್ದಳು. ತನ್ನ ದೊಡ್ಡ ಕುಟುಂಬವನ್ನು ನಿಭಾಯಿಸಲು ಈಕೆ 'ಕಾಲ-ಚಲನೆಯ' ನಿಯಮಗಳನ್ನು ಬಳಸುತ್ತಿದ್ದಳಂತೆ. ಇವಳ ಮಗ ಬರೆದಿದ್ದ ಇವರ ಕುಟುಂಬದ ಜೀವನದ ವೃತ್ತಾಂತ ಆಧರಿಸಿದ *'Cheaper by the Dozen (ಚೀಪರ್ ಬೈ ದಿ ಡಜನ್)'* ಚಲನಚಿತ್ರ ಬಹಳ ಜನಪ್ರಿಯವಾಯಿತು.



ಲಿಲಿಯೆನ್
ಎವೆಲಿನ್
ಗಿಲಬ್ರೆತ್
( 1878-1972)

ಆಸ್ಟ್ರಿಯಾದಲ್ಲಿ ಹುಟ್ಟಿದ ಮೆಲನಿ 19ನೆಯ ವಯಸ್ಸಿನಲ್ಲೇ ಆರ್ಥರ್ ಕ್ಲೈನ್ ಅನ್ನು ವಿವಾಹವಾಗಿ 1910ರಲ್ಲಿ ಬುಡಾಪೆಸ್ಟ್‌ಗೆ ಬಂದು ನೆಲಸಿದಳು. ಅಲ್ಲಿ ಅವಳಿಗೆ ಸ್ಯಾಂಡೋರ್ ಫೆರೆನ್ಸಿ (Sándor Ferenczi) ಬಳಿ ಮನೋವಿಶ್ಲೇಷಣೆ ಕಲಿಯುವ ಅವಕಾಶ ಒದಗಿತು. ಆತ ಅವಳಿಗೆ ಅವಳ ಮೂರು ಮಕ್ಕಳನ್ನೇ ಅಧ್ಯಯನ ಮಾಡಲು ಪ್ರೇರೇಪಿಸಿದ. ಇದರ ಫಲವಾಗಿ 'ಪ್ಲೇ ಥೆರಪಿ (Play therapy)' ಎಂಬ ವಿಧಾನ ಹುಟ್ಟಿತು. 1922ರಲ್ಲಿ ಅವಳ ಮದುವೆ ಮುರಿದುಬಿದ್ದು ಅವಳು ಬರ್ಲಿನ್‌ಗೆ ಬಂದು ಪ್ರಖ್ಯಾತನಾಗಿದ್ದ ಕಾರ್ಲ್ ಏಬ್ರಹಾಮ್ (Karl



ಮೆಲನಿ ರೈಸಸ್ ಕ್ಲೈನ್ (1882-1960)

Abraham) ಜೊತೆ ಕೆಲಸಮಾಡಿದಳು. ಇವಳ ವಿಧಾನಗಳು ಆನಾ ಫ್ರಾಯ್ಡ್‌ಳ ಚಿಂತನೆಗೆ ವಿರುದ್ಧವಾಗಿದ್ದು ಫ್ರಾಯ್ಡ್‌ನ ಟೀಕೆಗೂ ಒಳಗಾಗಿತ್ತು. ಬರ್ಲಿನ್‌ನಲ್ಲಿ ಅವಳಿಗೆ ಹೆಚ್ಚು ಬೆಂಬಲ ಸಿಗಲಿಲ್ಲ. ಅರ್ನೆಸ್ಟ್ ಜೋನ್ಸ್ (Ernest Jones) ಆಹ್ವಾನದ ಮೇರೆಗೆ ಲಂಡನ್‌ನಲ್ಲಿ ಬಂದು ನೆಲಸಿ ಮನೋವಿಶ್ಲೇಷಣೆಗೆ ತರಬೇತಿ ಕೇಂದ್ರ ಸ್ಥಾಪಿಸಿದಳು. ವ್ಯಕ್ತಿ/ವಸ್ತು-ಸಂಬಂಧ ಸಿದ್ಧಾಂತ (object relation theory) ಕ್ಕೆ ಅವಳ ಚಿಂತನೆಗಳು ಮೂಲವಾದವು. ಅವಳ ವೈಯಕ್ತಿಕ ಜೀವನದಲ್ಲಿ ಬಾಲ್ಯದಿಂದ 1960ರಲ್ಲಿ ಮರಣ ಹೊಂದುವವರೆಗೂ ದುರಂತಗಳ ಸಾಲೇ ಇತ್ತು. ಆದರೆ ಅವಳು 1932 ರಲ್ಲಿ ಬರೆದ 'The Psychoanalysis of Children (ದಿ ಸೈಕೋಅನಾಲಿಸಿಸ್ ಅಫ್ ಚಿಲ್ಡ್ರನ್)' ಮತ್ತು ಅವಳ ಚಿಕಿತ್ಸಾ ವಿಧಾನಗಳು ಇಂದಿಗೂ ಪ್ರಸ್ತುತವೆನಿಸಿವೆ.



ಹೆಲೆನ್ ರೋಸೆನ್ಯಾಕ್ ಡಾಯ್ಟ್ (1884-1982)

ಪೋಲೆಂಡ್ ಮೂಲದ ಕುಟುಂಬದಲ್ಲಿ ಹುಟ್ಟಿದ ಹೆಲೆನ್ ಆಸ್ಟ್ರಿಯಾದಲ್ಲಿ ನೆಲೆಸಿದ್ದು ಫ್ರಾಯ್ಡ್‌ನ ಸಹಾಯಕಿಯಾಗಿದ್ದಳು. ಮಹಿಳೆಯರ ಮನೋವಿಶ್ಲೇಷಣೆಯನ್ನು ವಿಶಿಷ್ಟವಾಗಿ ಅಧ್ಯಯನ ಮಾಡುವುದರಲ್ಲಿ ಮೊದಲಿಗಳು. 1912ರಲ್ಲಿ ಫೀಲಿಕ್ಸ್ ಡಾಯ್ಟ್ ನನ್ನು ವಿವಾಹವಾಗಿ ಅವರಿಗೆ ಮಾರ್ಟಿನ್ ಎಂಬ ಮಗನಾದ. 1935ರಲ್ಲಿ ನಾಝಿಗಳಿಂದ ತಪ್ಪಿಸಿಕೊಂಡು ಮ್ಯಾಸಚ್ಯೂಸೆಟ್ಸ್‌ಗೆ ಬಂದು ಅಲ್ಲಿ ತನ್ನ ಮರಣದವರೆಗೂ ನೆಲಸಿದ್ದಳು. ಸ್ತ್ರೀಯರಲ್ಲಿ ಲೈಂಗಿಕತೆಯ ಬಗ್ಗೆ ಮೊದಲು ಬರೆದ ಮನೋವಿಜ್ಞಾನಿ ಎನಿಸಿಕೊಂಡವಳು. 'Psychology of Women - vol 1 & 2 (ಸೈಕಾಲಜಿ ಆಫ್ ವಿಮೆನ್ - ಸಂ. 1 & 2 )' ಎಂಬ ಗ್ರಂಥವನ್ನು 1944-45ರಲ್ಲಿ ಹೊರತಂದಳು. ಇವಳು ಫ್ರಾಯ್ಡ್ ನ ಸ್ತ್ರೀ ವಿರೋಧಿ ತತ್ವಗಳನ್ನು ಸಮರ್ಥಿಸುತ್ತಾಳೆ ಎಂಬ ನಂಬಿಕೆ ಇದ್ದುದ್ದರಿಂದ ಸ್ತ್ರೀವಾದಿಗಳ ಟೀಕೆಗೆ ಗುರಿಯಾದಳು. ಆದರೆ, ಪ್ರಥಮಬಾರಿಗೆ ಹೆಣ್ಣಿನ ಜೀವನದ ಎಲ್ಲಾ ಅವಸ್ಥೆಗಳನ್ನೂ ಮನೋವಿಶ್ಲೇಷಣಾ ಮೂಲದಿಂದ ಪರೀಕ್ಷಿಸಿದ್ದು ಕಡಮೆ ಸಾಧನೆಯಾಗಿರಲಿಲ್ಲ. ಇವಳ "As-If (ಆಸ್ - ಇಫ್)" ಎನ್ನುವ ಪರಿಕಲ್ಪನೆ, ಅಂದರೆ ಮಹಿಳೆ ಬೇರೆಯವರೊಡನೆ ತನ್ನನ್ನೇ ಗುರುತಿಸಿಕೊಳ್ಳುವ ವಿಶೇಷ ಸಾಮರ್ಥ್ಯ, ಪ್ರಸಿದ್ಧವಾಗಿದೆ.



ಕೆರೆನ್ ಡ್ಯಾನಿಯಲ್ಸನ್ ಹಾರ್ನಿ (1885-1952)

ಕೆರೆನ್ ಜರ್ಮನಿಯಲ್ಲಿ ಹುಟ್ಟಿ ನಂತರ ನಾಝಿಗಳ ಕಿರುಕುಳವನ್ನು ತಪ್ಪಿಸಿಕೊಂಡು ಅಮೇರಿಕಾದಲ್ಲಿ ನೆಲೆಸಿದ್ದಳು. ಹೆಣ್ಣಿನಲ್ಲಿ ಶಿಶ್ನ ಇಲ್ಲದಿರುವುದು 'ಶಿಶ್ನ ಮತ್ಸರ (penis envy)' ಕ್ಕೆ ಕಾರಣವಾಗುತ್ತದೆ ಎಂದಿದ್ದ ಪ್ರಖ್ಯಾತ ಮನೋವಿಶ್ಲೇಷಕ ಸಿಗ್ಮಂಡ್ ಫ್ರಾಯ್ಡ್ ನ ಸಿದ್ಧಾಂತವನ್ನು ಪ್ರಶ್ನಿಸಿ ಗಂಡಿಗೆ ಜನ್ಮ ನೀಡಲು

ಅಸಾಧ್ಯವಾದುದರಿಂದ ಅವನಲ್ಲಿ ‘ಗರ್ಭ ಮತ್ಸರ (womb envy)’ ಇರಬೇಕು ಎಂದು ಫ್ರಾಯ್ಡ್ ಗೆ ಸವಾಲು ಹಾಕಿದ್ದಳು. ಸ್ತ್ರೀವಾದಿ ಮನೋವಿಜ್ಞಾನಕ್ಕೆ ಬುನಾದಿ ಹಾಕಿದ ಕೆರೆನ್ ತನ್ನದೇ ಆದ ಮನೋವಿಶ್ಲೇಷಣೆಯ ವಿಧಾನವನ್ನು ರೂಪಿಸಿ ಮನೋಬೇನೆಗಳ ಹುಟ್ಟಿಗೆ ಕಾರಣವಾಗುವ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ ಕಾರಕಗಳನ್ನು ಗುರುತಿಸಿದಳು. ಇವಳನ್ನು ಒಬ್ಬ ಪ್ರಮುಖ ‘ನವ-ಫ್ರಾಯ್ಡ್ ಪಂಥೀಯಳು’ ಎನ್ನಲಾಗುತ್ತದೆ.

ಲೀಟಾ ಲಿಂಕನ್‌ನ ನೆಬ್ರಾಸ್ಕಾ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಶಿಕ್ಷಣ ಮುಗಿಸಿ ಶಿಕ್ಷಕಿಯಾಗುವ ಪದವಿಯನ್ನೂ ಪಡೆದು ನೆಬ್ರಾಸ್ಕಾದಲ್ಲಿ ಎರಡು ಪ್ರೌಢಶಾಲೆಗಳಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದಳು. ಹ್ಯಾರಿ ಲೀವೈ ಹಾಲಿಂಗ್ವರ್ತ್ ಅನ್ನು ವಿವಾಹವಾಗಿ ನ್ಯೂಯಾರ್ಕ್ ಗೆ ಬಂದಾಗ ವಿವಾಹಿತ ಮಹಿಳೆಯರು ಶಿಕ್ಷಕರಾಗಲು ಅನುಮತಿ ಇಲ್ಲದ ಕಾರಣ ನಿರುದ್ಯೋಗಿಯಾದಳು. ಹ್ಯಾರಿ ಅವಳನ್ನು ಮತ್ತೆ ಓದಲು ಪ್ರೇರೇಪಿಸಿದ. ಶೈಕ್ಷಣಿಕ ಮನೋವಿಜ್ಞಾನವನ್ನು ಥಾರ್ನ್ಡೈಕ್ ನ ಬಳಿ ಅಧ್ಯಯನ ಮಾಡಿ ಮಹಿಳೆಯರ ಋತುಚಕ್ರದ ಬಗ್ಗೆ ಸಂಶೋಧನೆ ಮಾಡಿದಳು. ಕೆಲವು ಕಾಲ ಬುದ್ಧಿಮಾಂದ್ಯ ಮಕ್ಕಳ ಸೇವಾ ಕ್ಷೇತ್ರದಲ್ಲೂ ದುಡಿದಿದ್ದು ಮುಂದೆ ಬೆಲ್ಲೂವ್ಯ ಆಸ್ಪತ್ರೆಯ ಮನೋವಿಜ್ಞಾನ ಪ್ರಯೋಗಾಲಯದ ಮುಖ್ಯಸ್ಥೆಯಾದಳು. ಇವಳು ‘ಪ್ರತಿಭಾವಂತ’ ಮಕ್ಕಳ ಮೇಲೆ ಮಾಡಿದ ಅಧ್ಯಯನದಿಂದ ಪ್ರಸಿದ್ಧಳಾದಳು. ಹೊಟ್ಟೆಯ ಕ್ಯಾನ್ಸರ್‌ನಿಂದ ಅಕಾಲ ಮರಣವಪ್ಪಿದ ಲೀಟಾ ನಡೆಸಿದ್ದ 180 ಐ.ಕ್ಯೂ (I.Q).ಗಿಂತ ಹೆಚ್ಚು ಬುದ್ಧಿಶಕ್ತಿಯುಳ್ಳ ಮಕ್ಕಳ ಅಧ್ಯಯನದ ಫಲಿತಾಂಶವನ್ನು ಇವಳ ಮರಣಾನಂತರ ಹ್ಯಾರಿ 1942ರಲ್ಲಿ ಪ್ರಕಟಿಸಿದ.



ಲೀಟಾ ಸ್ಟೆಟ್ಟರ್
ಹಾಲಿಂಗ್ವರ್ತ್
(1886-1939)

ಫ್ಲೋರೆನ್ಸ್ ಅಮೇರಿಕಾದ ಪೌರಳಾಗಿದ್ದು ಮಿನ್ನೆಸೋಟಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿಯಾಗಿದ್ದಳು. ಮಕ್ಕಳ ಬುದ್ಧಿಶಕ್ತಿಯನ್ನು ಅಳೆಯಲು ‘Draw-a-man-test (ಡ್ರಾ-ಏ-ಮ್ಯಾನ್ ಪರೀಕ್ಷೆ),’ ಅಂದರೆ ಮಗು ಬಿಡಿಸುವ ಮಾನವನ ಚಿತ್ರದ ಮೂಲಕ ಬುದ್ಧಿಶಕ್ತಿ ಅಳೆಯುವ ವಿಧಾನವನ್ನು ರೂಪಿಸಿದಳು. ಇದನ್ನು “ಮೆಷರ್ಮೆಂಟ್ ಆಫ್ ಇಂಟೆಲಿಜೆನ್ಸ್ (Measurement of Intelligence)” ನಲ್ಲಿ ಪ್ರಕಟಿಸಿದ ನಂತರ 1932 ರಲ್ಲಿ ಸ್ಟ್ಯಾನ್ಫರ್ಡ್ ಬಿನೆ ಸ್ಕೇಲ್ ಫಾರ್ ಚಿಲ್ಡ್ರನ್ ಅನ್ನು ವಿಶದೀಕರಿಸಿ ಮಿನ್ನೆಸೋಟಾ ಪ್ರೀಸ್ಕೂಲ್ ಸ್ಕೇಲ್ ರೂಪಿಸಿದಳು. ಇವಳು ಮಕ್ಕಳ ಬಗ್ಗೆ ಬರೆದ ಮೂರು ಪುಸ್ತಕಗಳು ಬಹಳ ಮಹತ್ವಪೂರ್ಣ ಮಾಹಿತಿ ಒದಗಿಸುತ್ತವೆ.



ಫ್ಲೋರೆನ್ಸ್ ಲಾರಾ
ಗುಡ್‌ಇನಫ್
(1886-1959)

ಫ್ರೀಡಾ, ಜರ್ಮನಿಯ ಕಾರ್ಲ್ಸ್ರೂಹ್ ಎಂಬಲ್ಲಿ ಮಧ್ಯಮ ವರ್ಗದ ಯೆಹೂದಿ ಕುಟುಂಬದಲ್ಲಿ ಜನಿಸಿದ್ದಳು. ಕೋನಿಗ್ಸ್ಬರ್ಗ್ ವಿಶ್ವವಿದ್ಯಾಲಯದಲ್ಲಿ 17 ನೆಯ ವಯಸ್ಸಿಗೇ ಪದವಿ



ಫ್ರೀಡಾ ಫ್ರಾಂ-ರೈಕ್ಮನ್
(1889-1957)

ಪಡೆದಳು. ಮನೋವೈದ್ಯಕೀಯ ಕಲಿತು ನರತಜ್ಞನಾಗಿದ್ದ ಗೋಲ್ಡ್‌ಸ್ಟೀನ್ (Goldstein)ನ ಬಳಿ ಕೆಲಸಮಾಡಿ ಡ್ರೆಸ್ಡನ್ ಬಳಿ ಇರುವ ಮಾನಸಿಕ ಆಸ್ಪತ್ರೆಯಲ್ಲೂ ತರಬೇತಿ ಪಡೆದಳು. ಮುಂದೆ ಬರ್ಲಿನ್‌ಗೆ ಹೋಗಿ ಮನೋವಿಶ್ಲೇಷಣೆಯಲ್ಲಿ ತರಬೇತಿ ಪಡೆದಳು. ಅಲ್ಲಿ ಎರಿಕ್ ಫ್ರಾಂ (Erich Fromm)ನ ಪರಿಚಯವಾಗಿ 1926 ರಲ್ಲಿ ಅವನನ್ನು ವರಿಸಿದಳು. 1930ರಲ್ಲಿ ಫ್ರಾಂಕ್ಫರ್ಟ್‌ನಲ್ಲಿ ಮನೋವಿಕೃತಿಯಿರುವ ರೋಗಿಗಳ ಚಿಕಿತ್ಸೆಗೆ ಆಸ್ಪತ್ರೆ ತೆರೆದಿದ್ದು ನಾಝಿಗಳ ಕಾಟದಿಂದ 1933ರಲ್ಲಿ ಮುಚ್ಚಲ್ಪಟ್ಟಿತ್ತು. ಅದೇ ವರ್ಷ ಅವಳ ಮದುವೆಯೂ ಮುರಿದು ಬಿದ್ದು 1935 ರಲ್ಲಿ ಅಮೇರಿಕಾದ ರಾಕ್ವೆಲ್, ಮೇರಿಲ್ಯಾಂಡ್ ನಲ್ಲಿ ಬಂದು ನೆಲಸಿದಳು. ಇಲ್ಲಿ ಸಲ್ಲಿವೆನ್ (Sullivan)ನ ಪ್ರಭಾವಕ್ಕೆ ಒಳಗಾಗಿ ಇಚ್ಛಿತ್ತದಿಂದ ಬಳಲುವ ರೋಗಿಗಳ ಮನೋಚಿಕಿತ್ಸೆ ಪ್ರಾರಂಭಮಾಡಿದಳು. ಅವಳು ಚಿಕಿತ್ಸೆಯಲ್ಲಿ ಬಳಸಿದ ವಿಧಾನಗಳು "Principles of Intensive Psychotherapy (ಪ್ರಿನ್ಸಿಪಲ್ಸ್ ಆಫ್ ಇಂಟೆನ್ಸಿವ್ ಸೈಕೋಥೆರಪಿ)" (1950) ಎಂಬ ಕೃತಿಯಲ್ಲಿ ದಾಖಲಾಗಿವೆ.

ಕ್ಲೇರಾ ಅಮೇರಿಕಾದ ರೋಡ್ ಐಲೆಂಡ್‌ನಲ್ಲಿ ಧರ್ಮಬೀರುಗಳಾದ ಬ್ಯಾಪ್ಟಿಸ್ಟ್ ಕುಟುಂಬದಲ್ಲಿ ಜನಿಸಿದಳು. ಬಾಲ್ಯದಲ್ಲಿ ಮತಪ್ರಚಾರಕಿಯಾಗುವ ಕನಸು ಕಂಡವಳು ಮುಂದೆ ವೈದ್ಯಳಾಗಲು ನಿರ್ಧರಿಸಿದಳು. ಅವಳಿಗೆ ನಿಶ್ಚಯವಾಗಿದ್ದ ಹುಡುಗ ವೈದ್ಯಕೀಯ ಬಿಡು ಎಂದಾಗ, ಮದುವೆ ಬಿಟ್ಟು 1916 ರಲ್ಲಿ ಜಾನ್ ಹಾಪ್ಕಿನ್ಸ್ ಸೇರಿ ಮನೋವೈದ್ಯೆಯಾದಳು. ಇವಳು ಒಮ್ಮೆ ಇಚ್ಛಿತ್ತದ ಬಗ್ಗೆ ನೀಡಿದ ಉಪನ್ಯಾಸ ಕೇಳಿ ಅದನ್ನು ಮೆಚ್ಚಿದ ಸಲ್ಲಿವೆನ್ ಅವಳ ಪರಿಚಯ ಮಾಡಿಕೊಂಡ. ಅವನು ಆಗ ಬುಡಾಪೆಸ್ಟ್‌ನಲ್ಲಿ ಸ್ಯಾಂಡೋರ್ ಫೆರೆನ್ಸಿ ಅತೀವ ಆಘಾತಕ್ಕೆ ಒಳಗಾದವರಿಗೆ ಮಾಡುತ್ತಿದ್ದ ಚಿಕಿತ್ಸೆಯನ್ನು ಕಲಿತು ಅಮೇರಿಕಾದಲ್ಲಿ ಅದನ್ನು ಪರಿಚಯಿಸುವುದಾಗಿ ಅವಳಿಗೆ ಸಲಹೆಯಿತ್ತ. 1928ರಿಂದ ಫೆರೆನ್ಸಿ ಸಾಯುವವರೆಗೂ ಅವನಿಂದ ಕಲಿತು ನ್ಯೂಯಾರ್ಕಿನ ಸೈಕೋಅನಾಲಿಟಿಕ್ ಸಂಸ್ಥೆಗೆ 1934ರಲ್ಲಿ ಸೇರಿದಳು. ಹಾರ್ನಿ (Horney), ಫ್ರಾಂ (Fromm) ಮುಂತಾದವರೊಡನೆ ಕೆಲಸಮಾಡಿದ್ದಲ್ಲದೆ, ಮಹಿಳಾ ಮನೋವಿಜ್ಞಾನದ ಬೆಳವಣಿಗೆಗೂ ಸಹಾಯ ಮಾಡಿದಳು. ಸಮಾಜ ಮತ್ತು ಸಂಸ್ಕೃತಿಯ ಪ್ರಭಾವಗಳನ್ನು ಮಹಿಳೆಯ ವಿಕಾಸ ಹಾಗೂ ಚಿಕಿತ್ಸೆಯಲ್ಲಿ ಗುರುತಿಸಿದ್ದು ಅವಳ ವಿಶೇಷ ಕೊಡುಗೆ.



ಕ್ಲೇರಾ ಥಾಂಪ್ಸನ್
(1893- 1958)

ವಿಕಾಸ ಮನೋವಿಜ್ಞಾನದ ಒಬ್ಬ ಜನಕಿ ಹಾಗೂ ಮಾನವತಾವಾದ ಪೋಷಕಿ ಎನಿಸಿರುವ ಷಾರ್ಲೆಟ್ ಮ್ಯೂನಿಕ್‌ನಲ್ಲಿ ಆಸ್ವಾಲ್ಡ್ ಕುಲ್ಪೆ(Oswald Kulpe) ನ ಬಳಿ ಆಲೋಚನೆಗಳ ಬಗ್ಗೆ ಅಧ್ಯಯನ ನಡೆಸುತ್ತಿದ್ದಳು. ಪತಿ ಕಾರ್ಲ್ ಬ್ಯೂಲರ್ (Karl Buhler) ಜೊತೆಗೆ ವಿಯೆನಾ ಸೈಕಲಾಜಿಕಲ್ ಇನಸ್ಟಿಟ್ಯೂಟ್‌ನಲ್ಲಿ ಮಕ್ಕಳ ಮತ್ತು ಹದಿಹರೆಯದವರ ಬಗ್ಗೆ ಸಂಶೋಧನೆಗಳನ್ನು ಪ್ರಾರಂಭಿಸಿದಳು. ಷಾರ್ಲೆಟ್ ಅಮೇರಿಕಾಗೆ ಹೋಗಿ ಅಂದಿನ ಪ್ರಮುಖ ಮನೋವಿಜ್ಞಾನಿಗಳೊಡನೆ ಸಂಪರ್ಕ ಬೆಳೆಸಿದಳು. ಜೀವಿತಾವಧಿ ವಿಕಾಸದ ಐದು ಹಂತಗಳು, ಶೈಶವದಲ್ಲಿ ಮಕ್ಕಳ ಸಂಜ್ಞಾನಾತ್ಮಕ ಪ್ರಕ್ರಿಯೆಗಳು, 'ಮಾನಸಿಕ' ವಯಸ್ಸು ಮತ್ತು 'ವಿಕಾಸ' ವಯಸ್ಸು, ಜೀವಿತಾವಧಿ ಅಧ್ಯಯನಕ್ಕೆ ರಚನಾತ್ಮಕ ವಿಧಾನದ ಅನ್ವಯಿಕೆ - ಇವೇ ಮುಂತಾದ ವಿಷಯಗಳ ಬಗ್ಗೆ ಅವಳ ಅಧ್ಯಯನಗಳು ಮಹತ್ವಪೂರ್ಣವಾಗಿದ್ದವು. 1938 ರಲ್ಲಿ ನಾಝಿ ವಿರೋಧಿ ಹೇಳಿಕೆಗಳಿಂದಾಗಿ ಕಾರ್ಲ್ ಬಂಧಿಸಲ್ಪಟ್ಟ. 1939 ರಲ್ಲಿ ಅವನನ್ನು ಬಿಡಿಸಿಕೊಂಡು 1940ರ ಹೊತ್ತಿಗೆ ಇಬ್ಬರೂ ಅಮೇರಿಕಾ ತಲುಪಿದರು. ಹದಿಹರೆಯದ ಬಗ್ಗೆ ವಿಶೇಷ ಒಳನೋಟ ಮತ್ತು ಮನೋಚಿಕಿತ್ಸೆಯಲ್ಲಿ ಮೌಲ್ಯಗಳ ಬಗ್ಗೆ ಇವಳ ಬರಹಗಳು ಪ್ರಭಾವಶಾಲಿಯಾಗಿದ್ದವು. ಮ್ಯಾಸ್ಲೋ (Maslow), ರಾಜರ್ಸ್ (Rogers) ಮುಂತಾದವರನ್ನು ಬೆಂಬಲಿಸಿದ್ದಲ್ಲದೆ ಜೀವಿತಾವಧಿ ಅಧ್ಯಯನಕ್ಕೆ ಬಲವಾದ ಹಿನ್ನೆಲೆ ಒದಗಿಸಿದ ಕೀರ್ತಿ ಇವಳದು.


ಷಾರ್ಲೆಟ್ ಮೆಲಕಾಸ್ಕಿ ಬ್ಯೂಲರ್
(1893-1974)


ಸೈಕಿ ಕೆಟೆಲ್
(1893-1989)

ಅಮೇರಿಕಾದ ಪ್ರಸಿದ್ಧ ಮನೋವಿಜ್ಞಾನಿ ಜೇಮ್ಸ್ ಮಕೀನ್ ಕೆಟೆಲ್ ಮಗಳು ಸೈಕಿ. ಇವಳು ತನ್ನ ಇತರ ಮಕ್ಕಳಷ್ಟು ಬುದ್ಧಿವಂತಳಲ್ಲ ಎಂದು ಜೇಮ್ಸ್ ಇವಳು ಕಾಲೇಜಿಗೆ ಸೇರುವುದನ್ನು ಬೆಂಬಲಿಸಲಿಲ್ಲ. ತಾನೇ ಕೆಲಸಮಾಡಿ ಹಣ ಉಳಿಸಿ ಕಾರ್ನೆಲ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯಗಳಲ್ಲಿ ಓದಿ ಹಾರ್ವರ್ಡ್ ನಿಂದ ಶಿಕ್ಷಣದ ಡಾಕ್ಟರೇಟ್ ಪದವಿ ಪಡೆದ ಪ್ರಥಮ ಮಹಿಳೆ ಇವಳು. ಬುದ್ಧಿಶಕ್ತಿ ಪರೀಕ್ಷೆಗಳ ಬಗ್ಗೆ ಪುಸ್ತಕ ಹೊರತಂದದ್ದಲ್ಲದೆ ಅತಿ ಚಿಕ್ಕ ವಯಸ್ಸಿನ ಮಕ್ಕಳ ಬುದ್ಧಿಶಕ್ತಿ ಮಾಪನಕ್ಕೆ ಪರೀಕ್ಷೆ ವಿಧಾನವನ್ನು ರೂಪಿಸಿದ್ದಳು. ಇದು ಎರಡರಿಂದ 30 ತಿಂಗಳ ಶಿಶುಗಳ ಮಿದುಳಿನ ಬೆಳವಣಿಗೆಯನ್ನು ಪರೀಕ್ಷಿಸಲು ನೆರವಾಗಿತ್ತು. ಸುಮಾರು 25 ವರ್ಷಗಳ ಕಾಲ ಲ್ಯಾಂಕೆಸ್ಟರ್ ಮಕ್ಕಳ ಮಾರ್ಗದರ್ಶನ ಕೇಂದ್ರದಲ್ಲಿ ಮುಖ್ಯ ಮನೋವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದಳು. ಕೆಟೆಲ್ ಶಿಶು ಬುದ್ಧಿಮಾಪನ ಇವಳ ಪ್ರಮುಖ ಕೊಡುಗೆ.


ಆನಾ ಫ್ರಾಯ್ಡ್
(1895-1982).

ಫ್ರಾಯ್ಡ್‌ನ ಆರು ಮಕ್ಕಳಲ್ಲಿ ಕಿರಿಯವಳಾದ ಆನಾ ತಂದೆಗೆ ಬಹಳ ಹತ್ತಿರವಾಗಿದ್ದಳು. ವಿಯೆನಾದಲ್ಲಿ ಹುಟ್ಟಿ ಶಿಕ್ಷಣ ಪಡೆದು ಮಕ್ಕಳ ಶಾಲೆಯಲ್ಲಿ

ಶಿಕ್ಷಕಿಯಾಗಿದ್ದಳು. ತಂದೆಯಿಂದ ಪ್ರಭಾವಿತಳಾಗಿದ್ದರೂ, ಅವನ ನೆರಳಿನಲ್ಲಿರಲಿಲ್ಲ. 1923 ರಲ್ಲಿ ವಿಯೆನಾದಲ್ಲಿ ಮಕಳ ಮನೋವಿಶ್ಲೇಷಣೆ ಪ್ರಾರಂಭಿಸಿದ್ದು ಇವಳಿಂದ ಎರಿಕ್ಸನ್ ಮುಂತಾದವರು ಪ್ರಭಾವಿತರಾದರು. 1938 ರಲ್ಲಿ ನಾಝಿಗಳಿಂದ ತಪ್ಪಿಸಿಕೊಂಡು ತನ್ನ ತಂದೆಯೊಡನೆ ಇಂಗ್ಲೆಂಡಿಗೆ ಹೋಗಿ ಹ್ಯಾಂಪ್‌ಸ್ಟೆಡ್ ನಲ್ಲಿ ನಿರಾಶ್ರಿತ ಮಕ್ಕಳೊಡನೆ ಕೆಲಸ ಮಾಡಿದಳು. ಅವಳ ಪುಸ್ತಕಗಳು ಫ್ರಾಯ್ಡ್ ನ ಅಹಂ ರಕ್ಷಣಾ ತಂತ್ರಗಳನ್ನು ವಿಸ್ತರಿಸಿದ್ದಲ್ಲದೆ, ಮಕ್ಕಳ ವಿಶ್ಲೇಷಣೆ ಭಿನ್ನವಾಗಿರುತ್ತದೆ ಎಂದು ತೋರಿಸಿಕೊಟ್ಟವು. ಅವಳ ಮುಖ್ಯ ಕೃತಿ: “Ego and the Mechanisms of Defence (ಈಗೋ ಅಂಡ್ ದಿ ಮೆಕಾನಿಸಂಸ್ ಆಫ್ ಡಿಫೆನ್ಸ್)” (1936).



ಮಾರ್ಗರೆಟ್ ಶ್ಕೋನ್‌ಬರ್ಗರ್ ಮಾಲರ್ (1897-1985)

ಮಾರ್ಗರೆಟ್ ಹಂಗರಿಯಲ್ಲಿ ಹುಟ್ಟಿ ವೈದ್ಯಳಾಗಿದ್ದು ಇವಳ ಶಿಶುವಿಕಾಸದ ‘ಪ್ರತ್ಯೇಕಿಕರಣ-ವ್ಯಷ್ಟೀಕರಣ’ ಸಿದ್ಧಾಂತ (separation-individuation theory of child development) ಬಹಳ ಪ್ರಸಿದ್ಧವಾಯಿತು. ಯೆಹೂದಿಯಾಗಿದ್ದರಿಂದ ವಿದ್ಯಾಭ್ಯಾಸದ ಸಮಯದಲ್ಲಿ ಮ್ಯುನಿಕ್ ನಲ್ಲಿ ತೊಂದರೆಯಾಗಿ ಜೆನಾಗೆ ಹೋದಳು. ಮುಂದೆ ವಿಯೆನಾದಲ್ಲಿ ಹೆಲೆನ್ ಡಾಯ್ಚ್ ಳ ಮಾರ್ಗದರ್ಶನದಲ್ಲಿ ಏಳುವರ್ಷ ತರಬೇತಿ ಪಡೆದು ಮನೋವಿಶ್ಲೇಷಕಿಯಾದಳು. 1936ರಲ್ಲಿ ಪಾಲ್ ಮಾಲರ್‌ನನ್ನು ವಿವಾಹವಾಗಿ ಇಬ್ಬರೂ ನಾಝಿಗಳಿಂದ ತಪ್ಪಿಸಿಕೊಳ್ಳಲು ಮೊದಲು ಬ್ರಿಟನ್ ನಂತರ ಅಮೇರಿಕಾಗೆ ವಲಸೆ ಹೋದರು. ಇಲ್ಲಿ ಪ್ರಖ್ಯಾತ ಶಿಶುವೈದ್ಯ ಬೆಂಜಮಿನ್ ಸ್ಪಾಕ್ (Benjamin Spock)ನ ಸಂಪರ್ಕ ಬೆಳೆಯಿತು. ಮನೋವಿಶ್ಲೇಷಣೆಯಲ್ಲಿ ಪ್ರಥಮಬಾರಿಗೆ ಮನೋವಿಕೃತಿಗಳಿರುವ ಮಕ್ಕಳನ್ನು ಚಿಕಿತ್ಸೆಗೆ ಒಳಪಡಿಸಿದ ಕೀರ್ತಿ ಇವಳದು. ಶಿಶು ತಾಯಿಯಿಂದ ಬೇರ್ಪಡುವ ಕ್ರಿಯೆಯಲ್ಲಿ ಅನೇಕ ಮಜಲುಗಳನ್ನು ಗುರುತಿಸಿದ್ದಲ್ಲದೆ ಮಕ್ಕಳ ಸಂಯುಕ್ತಜೀವಿ ಮನೋವಿಕೃತಿ (Symbiotic Psychosis)ಯನ್ನು ವಿವರಿಸಿದಳು. ಬಹಳ ಚಿಕ್ಕಂದಿನಲ್ಲಿ ತಾಯಿಯಿಂದ ಬೇರ್ಪಡುವುದರಿಂದ ಮಕ್ಕಳ ಮೇಲಾಗುವ ಪ್ರಭಾವವನ್ನು ಸಂಶೋಧನೆಗೆ ಒಳಪಡಿಸಿದಳು. ನ್ಯೂಯಾರ್ಕನಲ್ಲಿ ಮಾರ್ಗರೆಟ್ ಎಸ್. ಮಾಲರ್ ರಿಸರ್ಚ್ ಫೌಂಡೇಶನ್ ಇವಳ ಕೆಲಸವನ್ನು ಮುಂದುವರಿಸಿದೆ.



ಮೇರಿ ಕವರ್ ಜೋನ್ಸ್

ಮೇರಿ ಅಮೇರಿಕಾದ ವಿಕಾಸ ಮನೋವಿಜ್ಞಾನಿಯಾಗಿದ್ದಳು. ಇವಳು ವರ್ತನಾ ಚಿಕಿತ್ಸೆಯಲ್ಲಿ ಮಾಡಿದ್ದ ಸಾಧನೆಗೆ ಜೋಸೆಫ್ ವೊಲ್ಪೆ (Joseph Wolpe) ಇವಳನ್ನು ‘ವರ್ತನಾ ಚಿಕಿತ್ಸೆಯ ಜನನಿ’ ಎಂದು ಕರೆದಿದ್ದ. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಇವಳು ಕಂಡು ಹಿಡಿದ ವಿಸೂಕ್ಷ್ಮ ಸಂವೇದಿಕರಣ ವಿಧಾನ (desensitisation technique –



ಲೋಯಿಸ್ ಬಾರ್ಕ್ಲೆ ಮರ್ಫಿ
(1902- 2003)

ಸಂವೇದನಾಶೀಲತೆಯನ್ನು ಕಳೆಯುವ ವಿಧಾನ) ಬಹಳ ಪ್ರಚಲಿತವಾಯಿತು. ಮಕ್ಕಳ ವಿಕಾಸದ ಅಧ್ಯಯನ ಕ್ಷೇತ್ರದಲ್ಲಿ ದಶಕಗಳು ಸೇವೆ ಮಾಡಿದ್ದರೂ ಸಹ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪತಿ-ಪತ್ನಿ ಒಂದೇ ಕಡೆ ಕೆಲಸ ಮಾಡಲು ನಿಷೇಧವಿದ್ದ ಕಾರಣ ಮತ್ತು ಇವಳ ಪತಿ ಅಲ್ಲಿ ಪ್ರಾಧ್ಯಾಪಕನಾಗಿದ್ದುದ್ದರಿಂದ ಇವಳಿಗೆ ಅಲ್ಲಿ ಕೇವಲ ಸಹಾಯಕ ಪ್ರಾಧ್ಯಾಪಕಿ ಹುದ್ದೆ ಸಿಕ್ಕಿತ್ತು. ಇವಳು ಪತಿ ಹೆರಾಲ್ಡ್‌ನ ಸಹಯೋಗದೊಂದಿಗೆ ವಿಕಾಸ ಮನೋವಿಜ್ಞಾನದ ಬಗ್ಗೆ ಶೈಕ್ಷಣಿಕ ಟೆಲಿವಿಶನ್ ಪಾಠ ಸರಣಿಯನ್ನು ತಯಾರಿಸಿದ್ದಳು. ದಶಕಗಳ ನಂತರ, ಇವಳಿಗೆ ವಿಕಾಸ ಮನೋವಿಜ್ಞಾನದಲ್ಲಿ ಅತ್ಯುತ್ತಮ ಸೇವೆಗೆ 'ಜಿ. ಸ್ಟ್ಯಾನ್ಲಿ ಹಾಲ್' ಪುರಸ್ಕಾರ ದೊರೆಯಿತು.

ಲೋಯಿಸ್ ಶಿಕಾಗೋದಲ್ಲಿ ವಾಸ್ಸರ್ ಕಾಲೇಜಿನಲ್ಲಿ ಮಾರ್ಗರೆಟ್ ವಾಶ್ಬರ್ನ್ ಳ ಬಳಿ ಸಮಾಜ ಮನೋವಿಜ್ಞಾನ ಅಧ್ಯಯನ ಮಾಡಿದಳು. ಮುಂದೆ ನ್ಯೂಯಾರ್ಕ್ ನಲ್ಲಿ ಯೂನಿಯನ್ ಥಿಯೋಲಾಜಿಕಲ್ ಸೆಮಿನರಿಗೆ ಪ್ರವೇಶ ಪಡೆದು ಅಲ್ಲಿ ವಿಶೇಷವಾಗಿ ಭಾರತದ ಧರ್ಮಗಳ ಬಗ್ಗೆ ಅಧ್ಯಯನ ಮಾಡಿ ಪದವಿ ಪಡೆದಳು. ಈ ವೇಳೆಗೆ ಕೊಲಂಬಿಯಾದಲ್ಲಿದ್ದ ಗಾರ್ಡನರ್ ಮರ್ಫಿಯ ಪರಿಚಯವಾಗಿ 1926 ರಲ್ಲಿ ಇವರಿಬ್ಬರು ವಿವಾಹವಾದರು. 1937 ರಲ್ಲಿ ಸಾರಾ ಲಾರೆನ್ಸ್ ನರ್ಸರಿ ಶಾಲೆ ತೆರೆದು ಮಕ್ಕಳ ವ್ಯಕ್ತಿತ್ವದ ಬಗ್ಗೆ ಅಧ್ಯಯನಗಳನ್ನು ನಡೆಸಿದಳು. ಲೋಯಿಸ್ ಮೆನಿಂಗರ್ ಫೌಂಡೇಶನ್, ರಾಷ್ಟ್ರೀಯ ಮಾನಸಿಕ ಆರೋಗ್ಯ ಸಂಸ್ಥೆ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಸಲಹೆಗಾರ್ತಿಯಾಗಿದ್ದಳು. ವಿಕಾಸ ಮನೋವಿಜ್ಞಾನಕ್ಕೆ ಇವಳ ಕೊಡುಗೆಗೆ 1981ರಲ್ಲಿ 'ಜಿ. ಸ್ಟ್ಯಾನ್ಲಿ ಹಾಲ್' ಪುರಸ್ಕಾರ ಸಿಕ್ಕಿತು. ಮರ್ಫಿ ಸತ್ತ ಹತ್ತು ವರ್ಷಗಳ ನಂತರ ಅವನ ಜೀವಿತಕಾಲದ ಕೆಲಸವನ್ನು ಸಂಗ್ರಹಿಸಿ "Garden Murphy: Integrating, Expanding and Humanising Psychology (ಗಾರ್ಡನರ್ ಮರ್ಫಿ: ಇಂಟಿಗ್ರೇಟಿಂಗ್, ಎಕ್ಸ್‌ಪ್ಯಾಂಡಿಂಗ್ ಅಂಡ್ ಹ್ಯೂಮನೈಸಿಂಗ್ ಸೈಕಾಲಜಿ" ಎಂಬ ಕೃತಿ ಹೊರತಂದಳು. 101 ವರ್ಷಗಳ ತುಂಬು ಜೀವನ ನಡೆಸಿ 2003 ರಲ್ಲಿ ವಾಷಿಂಗ್ಟನ್.ಡಿ.ಸಿ. ಯಲ್ಲಿ ಮರಣಹೊಂದಿದಳು.



ಹೆಲೆನ್ ಫ್ಲಾಂಡರ್ಸ್ ಡನ್‌ಬಾರ್
(1902-1959)

ಶಿಕಾಗೋದಲ್ಲಿ ಶ್ರೀಮಂತ ಹಾಗೂ ಸುಶಿಕ್ಷಿತ ಕುಟುಂಬದಲ್ಲಿ ಜನಿಸಿದ ಹೆಲೆನ್‌ನ ಬೆಳವಣಿಗೆ ಸರಿಯಾಗದೆ ಅವಳ ಎತ್ತರ ಐದಡಿಗಿಂತಾ ಕಡಮೆಯಿತ್ತು. ಆದರೆ ಸಾಧನೆಯಲ್ಲಿ ಅವಳ ಸಮಕಾಲೀನರಿಗಿಂತ ಬಹು ಎತ್ತರ ಏರಿದಳು. ಗಣಿತ, ಮನೋವಿಜ್ಞಾನ ಮತ್ತು



ಮೇಮಿ ಫಿಪ್ಸ್ ಕ್ಲಾರ್ಕ್ (1914-1983)

ಧರ್ಮಶಾಸ್ತ್ರಗಳಲ್ಲಿ ಪದವಿ ಪಡೆದಳು. 1929ರಲ್ಲಿ ಯೂರೋಪ್‌ಗೆ ಪ್ರಯಾಣ ಮಾಡಿ, ವಿಯೆನಾದಲ್ಲಿ ಡಾಯ್ಚ್ ಳ ಮೇಲ್ವಿಚಾರಣೆಯಲ್ಲಿ ತನ್ನನ್ನು ಮನೋವಿಶ್ಲೇಷಣೆಗೆ ಒಳಪಡಿಸಿಕೊಂಡಿದ್ದಳಲ್ಲದೆ, ಯೂಂಗ್ ಮುಂತಾದವರನ್ನು ಸಂಪರ್ಕಿಸಿದಳು. 1930ರಲ್ಲಿ ವೈದ್ಯಕೀಯ ಪದವಿ ಪಡೆದಳು. ಏಳು ವರ್ಷಗಳಲ್ಲಿ ನಾಲ್ಕು ವೈದ್ಯಕೀಯ ವಿಷಯಗಳಲ್ಲಿ ಪದವಿ ಪಡೆದಳು. ಪ್ರತಿಷ್ಠಿತ ಆಸ್ಪತ್ರೆಗಳು, ಸಂಸ್ಥೆಗಳು, ಅಧಿಕಾರ ವರ್ಗದ ಸದಸ್ಯೆ, ಸಲಹಾಗಾರ್ತಿ, ಪ್ರಾಧ್ಯಾಪಕಿ - ಹೀಗೆ ಅನೇಕ ಕ್ಷೇತ್ರಗಳಲ್ಲಿ ಮತ್ತು ಹೊತ್ತ ಜವಾಬ್ದಾರಿಗಳಲ್ಲಿ ಯಶಸ್ವಿಯಾದಳು. ಆದರೆ ಅವಳ ಹೆಸರು ಪ್ರಸಿದ್ಧವಾಗಿರುವುದು ಅವಳ ಮನೋದೈಹಿಕ ಸಂಶೋಧನೆಗಳಿಂದ. 1934-38ರಲ್ಲಿ 1600 ರೋಗಿಗಳನ್ನು ಕಲೆಹಾಕಿ ಅಧ್ಯಯನ ಮಾಡಿ ಪ್ರತಿ ಮನೋದೈಹಿಕ ರೋಗಕ್ಕೆ ಹೊಂದುವ "ವ್ಯಕ್ತಿತ್ವದ ವ್ಯಕ್ತಿಚಿತ್ರ (personality profile)" ಗುರುತಿಸಿದಳು. 1943ರಲ್ಲಿ ಇವಳು ಬರೆದ "Psychosomatic Diagnosis (ಸೈಕೋ ಸೋಮ್ಯಾಟಿಕ್ ಡಯಗ್ನೋಸಿಸ್)" ಈ ಕ್ಷೇತ್ರದ ಪ್ರಥಮ ಸಂಶೋಧಿತ ಕೃತಿ.

ಕೊಲಂಬಿಯಾದಲ್ಲಿ ಹೆನ್ರಿ ಗ್ಯಾರೆಟ್ (Henry Garrett) ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಮಾಡಿದ ಪ್ರಥಮ ಆಫ್ರಿಕನ್ – ಅಮೆರಿಕನ್ ಮಹಿಳೆ ಇವಳು. ಮೇಮಿ ಹುಟ್ಟಿದ್ದು ಬ್ರಿಟಿಷ್ ವೆಸ್ಟ್ ಇಂಡೀಸ್‌ನಿಂದ ಬಂದು ಅಮೇರಿಕಾದ ಅರ್ಕನ್ಸಾನಲ್ಲಿ ನೆಲಸಿದ್ದ ಕುಟುಂಬದಲ್ಲಿ. ಕರಿಯಳಾಗಿದ್ದ ಕಾರಣ, ಪ್ರತ್ಯೇಕಿಸಿದ್ದ ಶಾಲೆಗಳಲ್ಲಿ ಓದಿ ನಂತರ ಕರಿಯರಿಗೆ ಮೀಸಲಾಗಿದ್ದ ಹೌವರ್ಡ್ ವಿಶ್ವವಿದ್ಯಾಲಯ ಸೇರಿದಳು. ಅಲ್ಲಿ ಮುಂದೆ ಅವಳ ಪತಿ ಮತ್ತು ಸಹೋದ್ಯೋಗಿಯಾದ ಕೆನೆತ್ ಕ್ಲಾರ್ಕ್ ನ ಸಲಹೆಯ ಮೇರೆಗೆ ಮನೋವಿಜ್ಞಾನ ಅಧ್ಯಯನ ಮಾಡಿದಳು. ಹಾರ್ಲೆಮ್ ನಲ್ಲಿ ಕರಿಯ ಮಕ್ಕಳ ದುರವಸ್ಥೆ ತಪ್ಪಿಸಲು ಪತಿಯೊಡನೆ 1946 ರಲ್ಲಿ ನಾರ್ಥಸೈಡ್ ಸೆಂಟರ್ ಫಾರ್ ಚೈಲ್ಡ್ ಡೆವೆಲಪ್ಮೆಂಟ್ ತೆರೆದಳು. ಇವಳು ಪ್ರಸಿದ್ಧಳಾಗಿದ್ದು 'ಕ್ಲಾರ್ಕ್ ಡಾಲ್' ಪ್ರಯೋಗದಿಂದ. ಮಕ್ಕಳಲ್ಲಿ ಸ್ವಯಂಕಲ್ಪನೆಯ ಬಗ್ಗೆ ಮಾಡಿದ ಅಧ್ಯಯನದಿಂದ ಬಿಳಿಯರಿಂದ ಪ್ರತ್ಯೇಕಿಸಲ್ಪಟ್ಟ ಕರಿಯ ಮಕ್ಕಳ ಮೇಲೆ ಮತ್ತು ಸಮಾಜದ ಮೇಲಾಗುವ ದುಷ್ಪರಿಣಾಮದ ಅರಿವಾಯಿತು. ಪತಿ-ಪತ್ನಿ ಅನೇಕ ಜನಾಂಗೀಯ ಪ್ರತ್ಯೇಕತೆಯ ಪ್ರಕರಣಗಳಲ್ಲಿ ಪರಿಣಿತ ಸಾಕ್ಷಿಗಳಾಗಿದ್ದರು. ಇದರ ಫಲವಾಗಿ ಅಮೇರಿಕಾದ ಸರ್ವೋಚ್ಚ ನ್ಯಾಯಾಲಯ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರತ್ಯೇಕತೆ ಸಂವಿಧಾನ ಬಾಹಿರ ಎಂದು ಆಜ್ಞೆ ಹೊರಡಿಸಿತು.

ಎಲಿನೋರ್ ಗಿಬ್ಸನ್ 1930ರ ದಶಕದಲ್ಲಿ ಏಲ್ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಕೋರಿದಾಗ ಮಹಿಳೆಯರಿಗೆ ಪ್ರಯೋಗಶಾಲೆಯಲ್ಲಿ ಪ್ರವೇಶ ನೀಡುವುದಿಲ್ಲ ಎನ್ನಲಾಗಿತ್ತು. ಫ್ರಾಯ್ಡಿಯನ್ ವಿಚಾರಗಳ ಉಪನ್ಯಾಸಕ್ಕೆ ಹಾಜರಾಗಲು ಅನುಮತಿ ಇರಲಿಲ್ಲ. ಕಾಲೇಜಿನ ಉಪಹಾರಗೃಹಕ್ಕೆ ಪ್ರವೇಶ ಮಾಡುವಂತಿರಲಿಲ್ಲ. ಇಂತಹ ಅನೇಕ ತಾರತಮ್ಯಗಳನ್ನು ಎದುರಿಸಿ ಪತಿ ಜೇಮ್ಸ್ ಗಿಬ್ಸನ್ ಜೊತೆ 'ವಿಕಾಸದ ಪರಿಸರಾತ್ಮಕ ಸಿದ್ಧಾಂತ' ಎಂಬ ವಿಚಾರ ಮುಂದಿಟ್ಟಳು. ಅನೇಕ ಪ್ರಶಸ್ತಿಗಳಿಗೆ ಪಾತ್ರಳಾಗಿದ್ದವಳು ಪ್ರಾಣಿಗಳು ಮತ್ತು ಮಾನವರಲ್ಲಿ 'ಆಳ' ದ ಪ್ರತ್ಯಕ್ಷಣ (depth perception) ವನ್ನು ಗುರುತಿಸಲು 'ವಿಶುಯಲ್ ಕ್ಲಿಫ್ (visual cliff)' ಎಂಬ ಪ್ರಯೋಗ ನಡೆಸಿದ್ದಳು.

ಮೇಲಿನ ಕೆಲವು ಉದಾಹರಣೆಗಳು ಮಹಿಳೆಯರು ಮನೋವಿಜ್ಞಾನದ ಮುನ್ನಡೆಗೆ ನಡೆಸಿದ ನಿರಂತರ ಶ್ರಮವನ್ನು ಗುರುತಿಸುತ್ತದೆ. ಇನ್ನೂ ಅನೇಕ ಮಹಿಳೆಯರು ನೇಪಥ್ಯದಲ್ಲೇ ಉಳಿದರು. ಸ್ತ್ರೀವಾದಿಗಳ ಹೋರಾಟದಿಂದ ಇತಿಹಾಸದಲ್ಲಿ ಅಡಗಿರುವ ಮಹಿಳೆಯರ ಹೆಸರನ್ನು ಹೆಕ್ಕಿ ತೆಗೆಯುವ ಪ್ರಯತ್ನವಾಗಿದೆ. ಮಾಡ್ ಮೆರಿಲ್ ಜೇಮ್ಸ್ (Maud Merrill James) ಕ್ಯಾಲಿಫೋರ್ನಿಯಾದಲ್ಲಿ ಮಕ್ಕಳ ಮಾನಸಿಕ ಚಿಕಿತ್ಸಾಲಯದ ನಿರ್ದೇಶಕಿಯಾಗಿದ್ದು ಬುದ್ಧಿಶಕ್ತಿ ಮಾಪನಕ್ಕೆ ಟರ್ಮನ್‌ಗೆ ಜೊತೆಯಾಗಿದ್ದಳು. ಮೆರಿಲ್-ಟರ್ಮನ್ ಪರೀಕ್ಷೆ ಪ್ರಚಲಿತವಾದಾಗ ಯಾರಿಗೂ ಈ ಮೆರಿಲ್ ಯಾರು ಎಂದು ತಿಳಿದಿರಲಿಲ್ಲ. ಥೆಲ್ಮಾ ಗಿನ್ ನಾರ್ತ್ ಕ್ಯಾರೊಲೈನಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿಯಾಗಿದ್ದು ಪತಿ ಥರ್ಸ್ಟೋನ್ (Thurstone) ನ ಕೆಲಸಕ್ಕೆ ಸಹಾಯಕಿಯಾಗಿದ್ದಳು. ಪ್ರಾಥಮಿಕ ಮನೋಸಾಮರ್ಥ್ಯಗಳ ಪರಿಕಲ್ಪನೆ ಮತ್ತು ಗುಂಪು ಮಾಪನಗಳು ಅವಳ ಕೊಡುಗೆಯಾದರೂ ಅವು ಅವಳ ಪತಿಯ ಹೆಸರಿನಲ್ಲೇ ಪ್ರಸಿದ್ಧವಾದವು. ಆನಾ ಅನಸ್ತಾಸಿ(Anne Anastasi) ಯನ್ನು 'ಮನೋಮಾಪನದ ಗುರು' ಎಂದೇ ಕರೆಯಲಾಗುತ್ತದೆ. ಅವಳಿಗೆ ಗರ್ಭಕೋಶದ ಕ್ಯಾನ್ಸರ್ ಇದ್ದು ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯಲಾಗಿದ್ದು ತನ್ನ 'ಅದೃಷ್ಟ' ವೆಂದೇ ಪರಿಗಣಿಸಿದ್ದಳು. ಏಕೆಂದರೆ ವಿವಾಹಿತೆ ಮತ್ತು ಮಾತೆಗೆ ಅನ್ವಯಿಕ ಕ್ಷೇತ್ರದಲ್ಲಿ ಸ್ಥಾನವೇ ಇಲ್ಲ ಎಂದಿದ್ದಳು. 1931ರಲ್ಲಿ ಯೆಹೂದಿ ಕುಟುಂಬದಲ್ಲಿ ಹುಟ್ಟಿದ್ದ ಫ್ಲೋರೆನ್ಸ್ ಲೆವಿನ್ ಡೆನ್ಮಾರ್ಕ್ (Florence Levin Denmark) ಮಹಿಳಾ ಮನೋವಿಜ್ಞಾನದ ಬಗ್ಗೆ ವೈಜ್ಞಾನಿಕ ಲೇಖನಗಳು, ಪುಸ್ತಕಗಳನ್ನು ಬರೆದುದ್ದಲ್ಲದೆ 'ಅಸೋಸಿಯೇಷನ್ ಫಾರ್ ವಿಮೆನ್ ಇನ್ ಸೈಕಾಲಜಿ' ಯ ಸಂಸ್ಥಾಪಕರಲ್ಲಿ ಒಬ್ಬಳಾಗಿದ್ದಳು. ಇವಳನ್ನು 'ಅಮೇರಿಕಾವನ್ನು ಬದಲಿಸಿದ ಸ್ತ್ರೀವಾದಿಗಳಲ್ಲಿ ಒಬ್ಬಳು ಎಂದು ವರ್ಣಿಸಲಾಗಿದೆ'.



ಎಲಿನೋರ್ ಜ್ಯಾಕ್ ಗಿಬ್ಸನ್
(1910- 2002)

ಆಸ್ಟ್ರಿಯಾದ ಎಮ್ಮಾ ಎಕ್ಸ್‌ಟನ್ (Emma Exton) ಫ್ರಾಯ್ಡ್ ನಿಂದ ವಿಶ್ಲೇಷಣೆಗೊಳಗಾಗಿದ್ದು ಮುಂದೆ ಪ್ರಥಮ ಮನೋವಿಶ್ಲೇಷಕಿ ಎನಿಸಿಕೊಂಡಳು. ಅಂದಿನ ವಿಯೆನಾದಲ್ಲಿ ಮಹಿಳಾ ವಿಮೋಚನೆಗೆ ಕೆಲಸಮಾಡಿದ್ದಳು. ನ್ಯಾನ್ಸಿ ಬೇಯ್ಲಿ (Nancy Bayley) ಬರ್ಕ್ಲಿಯಲ್ಲಿ ವಿಕಾಸದ ಅಧ್ಯಯನಗಳಿಗೆ ಮಹತ್ತರ ಕೊಡುಗೆ ನೀಡಿ ಶಿಶುವೈದ್ಯರಿಗೆ ಉಪಯುಕ್ತ ಮಾಪನ ತಯಾರಿಸಿದ್ದಳು. ಸುರುಕೋ ಹರಗುಚಿ (Tsuruko Haraguchi) ಎನ್ನುವ ಜಪಾನೀಯಳು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಥಾರ್ನ್ಡೈಕ್‌ನ ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಪಡೆದ ಮೊದಲ ಜಪಾನಿ ಮಹಿಳೆ. ರೂತ್ ವಿನೆಫ್ರೆಡ್ ಹೌವರ್ಡ್ (Ruth Winifred Howard) ವಿಶೇಷ ಅಗತ್ಯಗಳಿರುವ ವಿದ್ಯಾರ್ಥಿಗಳ ಅಧ್ಯಯನ ಮಾಡಿದ್ದಳು. ಅವಳು ಮನೋವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದ ಪ್ರಥಮ ಆಫ್ರಿಕನ್ ಮಹಿಳೆಯಾಗಿದ್ದಳು. ಬ್ಲುಮಾ ವುಲ್ಫೊವ್ನಾ ಝಿಗರ್ನಿಕ್ (Bluma Wulfovna Zeigarnik) ರಷ್ಯಾದ ಮನೋವೈದ್ಯೆಯಾಗಿದ್ದು ಬರ್ಲಿನ್ ಪ್ರಾಯೋಗಿಕ ಮನೋವಿಜ್ಞಾನ ಸಂಸ್ಥೆ ಮತ್ತು ವೈಗಾಟ್ಸ್ಕಿ ಬಳಗದ ಸದಸ್ಯೆಯಾಗಿದ್ದಳು. ಅವಳು ಸ್ಮೃತಿಯ ಬಗ್ಗೆ ನಡೆಸಿದ್ದ ಪ್ರಯೋಗ 'ಝಿಗರ್ನಿಕ್ ಎಫೆಕ್ಟ್ (Zeigarnik effect)' ಎಂದೇ ಪ್ರಸಿದ್ದವಾಗಿದೆ. 1970ರ ನಂತರ ಬಹಳಷ್ಟು ಮಹಿಳೆಯರು ಮನೋವಿಜ್ಞಾನ ಕ್ಷೇತ್ರದಲ್ಲಿ ಹೆಸರು ಮಾಡಿದರು. ಸುಮಾರು ಮೂರು ಶತಮಾನಗಳ ಬಳಿಕ ಮಹಿಳೆಯರಿಗೆ ಮನೋವಿಜ್ಞಾನದಲ್ಲಿ ಲಿಂಗತ್ವ ತಾರತಮ್ಯ ಇಲ್ಲದೆ ಪ್ರತಿಭೆ ಮತ್ತು ಸಾಧನೆಗಳಿಗೆ ಪುರಸ್ಕಾರ ದೊರೆಯುತ್ತಿದೆ.